


ಒಂದು ದಿನ ಬೆಂಗಳೂರಿನಿಂದ ಸರ್ಕಾರದ ಕಾರ್ಯದರ್ಶಿಯೊಬ್ಬರು ಕುಟುಂಬ ಸಮೇತ ಸಿಗಂದೂರು ದೇವಸ್ಥಾನಕ್ಕೆ ಹೋಗಲು ಹೊಳೆಬಾಗಿಲಿಗೆ ಬಂದಿದ್ದಾರೆಂಬ ಸುದ್ದಿ ಬಂತು. ಅವರನ್ನು ಹಿಂಬಾಲಿಸಿಕೊಂಡು ಕೈಗೊಂದು ಆಳು, ಕಾಲಿಗೊಂದು ಆಳುಗಳಂತೆ, ಶಿವಮೊಗ್ಗದ ಅಧೀಕ್ಷಕ ಎಂಜಿನಿಯರ್ರು, ಸಾಗರದ ಕಾರ್ಯನಿರ್ವಾಹಕ ಎಂಜಿನಿಯರ್ರು, ಸಹಾಯಕ ಕಾರ್ಯಪಾಲಕ ಎಂಜಿನಿಯರ್ರು, ಸಹಾಯಕ ಎಂಜಿನಿಯರ್ರು ಎಂಬೆಲ್ಲಾ ನಾಲ್ಕಾರು ಕೇಡರ್ರಿನ ಹತ್ತಾರು ಮಂದಿ ಪ್ರೋಟೋಕಾಲಿನಂತೆ ಬಂದುನಿಂತಿದ್ದರು. ಅವರಿಗೂ ಒಂದು ಅರ್ಜಿ ಗುಜರಾಯಿಸಿ ನೋಡೋಣ ಎಂದು ಯುವಪಡೆ ಮತ್ತೆ ಮುನ್ನುಗ್ಗಿತು. ಬೆಳಗ್ಗೆ ಹತ್ತು ಗಂಟೆಗೆ ಇವರು ಹೊಳೆಬಾಗಿಲನ್ನು ತಲುಪುವ ವೇಳೆಗೆ ಅವರ ಫಾರ್ಚೂನರ್ ಕಾರು ಲಾಂಚನ್ನು ಹತ್ತಿ ಮುಂದೆ ಹೋಗಿಬಿಟ್ಟಿತ್ತು.

ಇನ್ನೇನು ಒಂದೆರಡು ಗಂಟೆಯೊಳಗೆ ಪೂಜೆ ಮುಗಿಸಿಕೊಂಡು ಹಿಂದಿರುಗಿ ಬರುತ್ತಾರೆಂದು ಇವರು ಕಾದೇ ಕಾದರು. ಗಂಟೆಗೊಂದೊಂದರಂತೆ ಹೋಗಿ ಬಂದ ಲಾಂಚುಗಳನ್ನೆಲ್ಲ ಪರಿಶೀಲಿಸಿದರೂ ಅವರು ಬರಲೇಯಿಲ್ಲ. ಹಾಗೆ ಬಂದ ಸುದ್ದಿಯೇ ಸುಳ್ಳಿರಬೇಕು, ಇಲ್ಲವೇ ಅವರು ಅಲ್ಲಿಂದಲೇ ಮುಂದಕ್ಕೆ ಪ್ರಯಾಣಿಸಿರಬೇಕೆಂದು ಕಾದೂ ಕಾದು ಸುಸ್ತಾದ ಇವರು ಹೊರಡಬೇಕೆನ್ನುವಷ್ಟರಲ್ಲಿ, ಅವರಲ್ಲೇ ಒಬ್ಬ, 'ಕೊನೇ ಲಾಂಚ್‌ವರೆಗೂ ನೋಡೋಣ ತಡೀರ್ರಲೇ...' ಎಂದ. ಹಾಲ್ಟಿಂಗ್‌ಗೆಂದು ಕೊನೇ ಲಾಂಚೂ ಬಂದುಬಿಟ್ಟಿತು. ಆದರೆ ಅವರು ಮಾತ್ರ ಬರಲೇ ಇಲ್ಲ. 'ಯಾಕೋ ತಮ್ಮ